ಮೈಸೂರು ಸಂಸ್ಥಾನದ ಅಳುವ ಮಹಾಸ್ವಾಮಿಯವರಾದ

ಶ್ರೀಮನ್ಮಹಾರಾಜಾ ರಾಜಾಸಾಹೇಬ್ ಬಹದ್ದೂರ್‌ರವರ

ಹುಜೂರು ಮಹಾಸನ್ನಿಧಾನಂಗಳಲ್ಲಿ.

ಮೈಸೂರು ಪುರನಿವಾಸಿಗಳ ಪರವಾಗಿ ರಾಜಧಾನಿಯಲ್ಲಿ ಏರ್ಪಟ್ಟಿರುವ "ಸಂಗೀತಶಾಸ್ತ್ರರತ್ನ" ಕೆ. ವಾಸುದೇವಾಚಾರ್ಯರ ಸನ್ಮಾನಸಂಘದ ಕಾರ್ಯದರ್ಶಿಗಳಾದ ನೀತಿ ಮ್ಯುನಿಸಿಪಲ್ ವೈಸ್-ಪ್ರೆಸಿಡೆಂಟ್ ಎಂ. ರಾಮಸ್ವಾಮಿ ಮತ್ತು ಅಡ್ವೊಕೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್ ಪಿ. ಸೀತಾರಾಮಯ್ಯ ನಮ್ಮಾ ಭಕ್ತಿಪೂರ್ವಕವಾಗಿ ಅರ್ಪಿಸಿದ ವಿಜ್ಞಾಪನಪತ್ರಿಕೆ ಮಹಾಸ್ವಾಮಿ.

ಮಹಾಸ್ವಾಮಿಯವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಆಸ್ಥಾನ ಸಂಗೀತ ವಿದ್ವನ್ಮಂಡಲಿಯಲ್ಲಿ "ಸಂಗೀತಶಾಸ್ತ್ರರತ್ನ" ಎಂಬ ಅಮೂಲ್ಯವಾದ ಬಿರುದನ್ನು ಪಡೆದಿರುವ ಕಾನಕಾನಹಳ್ಳಿಯ ಶ್ರೀ॥ ವಾಸುದೇವಾಚಾರ್ಯರವರ ವೃದುಷ್ಯವನ್ನು ಮೆಚ್ಚಿ, ಮಹಾಜನರು ವೀ॥ ಆಚಾರ್ಯರವರಿಗೆ ರತ್ನಖಚಿತವಾದ ಒಂದು ಸುವರ್ಣ ಕಂಠಾಭರಣವನ್ನು ಸಮರ್ಪಿಸಿ ತಮ್ಮ ಸಂತೋಷವನ್ನು ಪ್ರದರ್ಶಿಸಲು ನಿಶ್ಚಯಿಸಿರುತ್ತಾರೆ—ಮಹಾಸ್ವಾಮಿ.

ಈ ಸಂದರ್ಭದಲ್ಲಿ ಮಹಾಜನರು ಕೈಗೊಂಡಿರುವ ಈ ಘನವಾದ ಉದ್ದೇಶಕ್ಕೆ ಮಹಾಸ್ವಾಮಿಯವರು ಅನುಜ್ಞೆಯನ್ನು ದಯೆಪಾಲಿಸಿ, ಈ ಕಾರ್ಯವು ಕ್ಷಿಪ್ರದಲ್ಲಿಯೇ ನೆರವೇರುವಂತೆ ಅನುಗ್ರಹಿಸಬೇಕಾಗಿ ಸಂಘದ ಪರವಾಗಿ ಅತ್ಯಂತ ವಿನಯ, ಭಯ ಭಕ್ತಿಗಳೊಡನೆ ಅರಿಕೆಮಾಡಿಕೊಳ್ಳುತ್ತೇವೆ— ಮಹಾಸ್ವಾಮಿ.

ಮಹಾಸ್ವಾಮಿಯವರ ಆಜ್ಞಾಧಾರಕರು,

ಮೈಸೂರು,
ಕಾ॥ 25—11—1931

ಗೌರವ ಕಾರ್ಯದರ್ಶಿಗಳು.

Permission is requested to present
a necklace to Sangita Sastra Rama Vasudevachariar
on behalf of the citizens of Mysore
May be kindly granted